ದಿನಾಂಕ 20-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿಯ ಪರ ಶ್ರೀಮತಿ ಎಸ್.ಟಿ.ಜೆ ವಕೀಲರಿಂದ ಶ್ರೀ ಆರ್.ವಿ.ಡಬ್ಲ್ಯೂ ವಕೀಲರ ಪರವಾಗಿಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಸಾಕ್ಷಿಯು ದಿಃ 18-08-2009 ರ ನೋಂದಾಯಿತ ಮೃತ್ಯು ಪತ್ರವನ್ನು ನೋಡಿ ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸದರಿ ಮೃತ್ಯು ಪತ್ರವನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿಯು ನೋಡಿ ಗುರುತಿಸಿದ ತನ್ನ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1,2, 4 ರಿಂದ 7, 9 ರಿಂದ 11 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಡಿ.ಎಂ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್

ಸಾಕ್ಷಿದಾರರ ಸಹಿ